# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ. ವಿ.ಜಿ. ಬಾಬು ಕೃಷಿ ಅಧಿಕಾರಿ(ಭೋಧಕರು) ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಚಿಕ್ಕನಹಳ್ಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ ಇವರ ರಾಜಿನಾಮೆ ಅಂಗೀಕರಿಸುವ ಕುರಿತು.

*****

**ಓದಲಾಗಿದೆ:-**

ಕೃಷಿ ಆಯುಕ್ತರ ಪತ್ರ ಸಂ. ಕೃಸಿಪ-5/ರಾಜೀನಾಮೆ/82/2010-11,ದಿನಾಂಕ: 15-04-2011 ಹಾಗೂ 01-12-2011,

**ಪ್ರಸ್ತಾವನೆ:-**

ಶ್ರೀ ವಿ.ಜಿ. ಬಾಬು, ಸರ್ಕಾರದ ಅಧಿಸೂಚನೆ ಸಂ. ಕೃತೋಇ 91 ಕೃಪಸೇ 2006, ದಿನಾಂಕ: 30-08-2008ರಲ್ಲಿ ಕೃಷಿ ಅಧಿಕಾರಿ ಹುದ್ದೆಗೆ ನೇಮಕಗೊಂಡು ದಿನಾಂಕ:12-09-2008 ರಿಂದ ಕೃಷಿ ಅಧಿಕಾರಿಯಾಗಿ ಉಪ ಕೃಷಿ ನಿರ್ದೇಶಕರ ಕಚೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ ಚಿಕ್ಕನಹಳ್ಳಿ ಶಿರಾ ತಾಲ್ಲೂಕು ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಕೌಟುಂಬಿಕ ಸಮಸ್ಯೆಗಳಿಂದ ಕೃಷಿ ಅಧಿಕಾರಿ ಹುದ್ದೆಯಲ್ಲಿ ಸೇವೆ ಸಲ್ಲಿಸಲು ಸಾದ್ಯವಾಗುತ್ತಿಲ್ಲವೆಂದು, ಮತ್ತು ಉನ್ನತ ವ್ಯಾಸಂಗ ಮುಗಿಸಿ ಖಾಸಗಿ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಲು ನಿರ್ಧರಿಸಿರುವುದಾಗಿ ತಿಳಿಸಿ, ತಾವು ದಿನಾಂಕ: 31-12-2011ರ ಅಪರಾಹ್ನದಿಂದ ಕೃಷಿ ಅಧಿಕಾರಿ ಹುದ್ದೆಗೆ ಸ್ವ-ಇಚ್ಚೆಯಿಂದ ರಾಜಿನಾಮೆ ಸಲ್ಲಿಸುತ್ತಿರುವುದಾಗಿ ತಿಳಿಸಿ, ತಮ್ಮ ರಾಜಿನಾಮೆಯನ್ನು ಅಂಗೀಕರಿಸಬೇಕೆಂದು ಕೃಷಿ ಆಯುಕ್ತರನ್ನು ಕೋರಿದ್ದರು. ಸದರಿ ಅಧಿಕಾರಿಯವರ ವಿರುದ್ದ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು, ಒಂದುವೇಳೆ ಇವರಿಂದ ಸರ್ಕಾರಕ್ಕೇನಾದರೂ ಬಾಕಿ ಬರುವುದಿದ್ದರೆ, ಅದನ್ನು ತುಂಬಿಕೊಡಲು ಬದ್ದರಿರುವುದಾಗಿ ಮುಚ್ಚಳಿಕೆ ನೀಡಿದ್ದು, ಸದರಿಯವರ ರಾಜಿನಾಮೆಯನ್ನು ಅಂಗೀಕರಿಸಬೇಕೆಂದು ಕೃಷಿ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಆದರೆ ಶ್ರೀಯುತರು ದಿನಾಂಕ: 09-08-2010ರಿಂದ ದಿನಾಂಕ: 08-10-2010ರವರೆಗೆ ಸಂಯುಕ್ತ ರಜೆ ಪಡೆದುಕೊಂಡು ರಜೆ ಮುಗಿದನಂತರವೂ ಅವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂದು ತಿಳಿಸಿದ್ದು ಆದ್ದರಿಂದ ಸದರಿ ಅಧಿಕಾರಿಯವರ ರಾಜಿನಾಮೆಯನ್ನು ದಿನಾಂಕ: 07-08-2010ರ ಅಪರಾಹ್ನದಿಂದ ಅಂಗೀಕರಿಸುವಂತೆ ಕೃಷಿ ಆಯುಕ್ತರು ಸರ್ಕಾರಕ್ಕೆ ಮೇಲೆ ಓದಲಾದ ದಿನಾಂಕ: 01-12-2011 ರಂದು ಕೊನೆಗೊಂಡ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ, ಶ್ರೀ ಎ.ಜಿ. ಬಾಬು, ಕೃಷಿ ಅಧಿಕಾರಿ, ಇವರು ಕೃಷಿ

--2--

ಅಧಿಕಾರಿ ಹುದ್ದೆಗೆ ನೀಡಿದ ರಾಜಿನಾಮೆಯನ್ನು ದಿನಾಂಕ: 07-08-2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಅಂಗೀಕರಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃಇ 108 ಕೃಪಸೇ 2011,**

**ಬೆಂಗಳೂರು, ದಿನಾಂಕ: 02-07-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ. ವಿ.ಜಿ. ಬಾಬು ಕೃಷಿ ಅಧಿಕಾರಿ(ಭೋಧಕರು) ಉಪ ಕೃಷಿ ನಿರ್ದೇಶಕರ ಕಚೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಚಿಕ್ಕನಹಳ್ಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ, ಇವರಿಂದ ಸರ್ಕಾರಕ್ಕೇನಾದರೂ ಬಾಕಿ ಬರುವುದಿದ್ದರೆ ಅದನ್ನು ಅವರಿಂದ ವಸೂಲು ಮಾಡುವ ಷರತ್ತಿನೊಂದಿಗೆ, ದಿನಾಂಕ: 07-08-2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಅವರ ರಾಜೀನಾಮೆ ಅಂಗೀಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

1) ಮಹಾಲೇಖಾಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ ಬೆಂಗಳೂರು.
3) ಉಪ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಚಿಕ್ಕನಹಳ್ಳಿ, ಶಿರಾ ತಾಲ್ಲೂಕು ತುಮಕೂರು ಜಿಲ್ಲೆ.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಕಾರ್ಯದರ್ಶಿಯವರಿಗೆ,
5) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಸಹಾಯಕರಿಗೆ,
6) ಸಂಬಂಧಪಟ್ಟ ಅಧಿಕಾರಿಯವರಿಗೆ ( ಅಯುಕ್ತರು ಕೃಷಿ ಇಲಾಖೆ ಬೆಂಗಳೂರು ಅವರ ಮೂಲಕ
7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.